ಅಲ್ಲಿ ಏನಾದರೂ ಬೇಡವಾದದ್ದು ಸಂಭವಿಸಿದರೆ ಈಗಲೂ ಕಸಿವಿಸಿಯಾಗುತ್ತದೆ. ಒಳ್ಳೆಯದು ಸಂಭವಿಸಿದರೆ ಸಂಭ್ರಮವಾಗುತ್ತದೆ. ವೈಚಾರಿಕತೆ ಮತ್ತು ಭಾವುಕತೆಗಳ ಹದವಾದ ಮಿಶ್ರಣದಲ್ಲಿ ಈಗಿನ ಪಯಣ.

◆ **ಅರೆಭಾಷೆ–ತುಳುವಿಗೆ ಮಾನ್ಯತೆ ದೊರಕಿಸುವಲ್ಲಿ ತುಂಬಾ ಪ್ರಯತ್ನಪಟ್ಟಿದ್ದೀರಿ. ಈ ಪ್ರಯತ್ನದಲ್ಲಿನ ನಿಮ್ಮ ಅನುಭವಗಳೇನು? ಇದಕ್ಕೆ ಸರಿಯಾದ ಬೆಂಬಲ ನಿಮಗೆ ಸಿಕ್ಕಿತೆ?**

ಸರಕಾರಗಳು ಸಣ್ಣ ಭಾಷೆಗಳ ಕುರಿತು ತೋರುತ್ತಿರುವ ನಿರ್ಲಕ್ಷ್ಯವು ಅವುಗಳನ್ನು ಅವಸಾನದ ಅಂಚಿಗೆ ತಂದು ನಿಲ್ಲಿಸಿವೆ. ಭಾರತದಲ್ಲಿ ಇದೀಗ 22 ಭಾಷೆಗಳನ್ನು ಸಂವಿಧಾನದ ಎಂಟನೆ ಪರಿಚ್ಛೇದಕ್ಕೆ ಸೇರಿಸಲಾಗಿದೆ. ಈ 22ರಲ್ಲಿ ಉತ್ತರ ಭಾರತದ 18 ಭಾಷೆಗಳೂ, ದಕ್ಷಿಣ ಭಾರತದ ಕೇವಲ 4 ಭಾಷೆಗಳೂ ಇವೆ. ಈ ಪ್ರಾದೇಶಿಕ ಅಸಮಾನತೆಯು ಅನೇಕ ಸಮಸ್ಯೆಗಳನ್ನು ಮುಂದೆ ಹುಟ್ಟುಹಾಕಲಿದೆ. ಜೊತೆಗೆ ಕೇಂದ್ರ ಸರಕಾರವು ಎಂಟನೆಯ ಪರಿಚ್ಛೇದದ ಕೆಲವು ಸವಲತ್ತುಗಳನ್ನು ಕಡಿತಗೊಳಿಸಲು ಆರಂಭಿಸಿದೆ.

ಸುಮಾರು 60ಲಕ್ಷ ಜನರಾಡುವ ತುಳುವನ್ನು ಕರ್ನಾಟಕ ರಾಜ್ಯವೇ ಇಂದಿನವರೆಗೆ ಅಧಿಕೃತ ಭಾಷೆಯೆಂದೇ ಘೋಷಿಸಿಲ್ಲವಲ್ಲ! ಆಂಧ್ರ ಪ್ರದೇಶವು ತೆಲುಗಿನ ಜೊತೆಗೆ ಉರ್ದುವನ್ನು, ಬಿಹಾರವು ಬಿಹಾರಿ ಭಾಷೆಯ ಜೊತೆಗೆ ಬಾಂಗ್ಲಾವನ್ನು, ಪಶ್ಚಿಮ ಬಂಗಾಳವು ಬಾಂಗ್ಲಾ ಜೊತೆಗೆ ಉರ್ದು, ಪಂಜಾಬಿ, ನೇಪಾಲಿ, ಒರಿಯಾ ಮತ್ತು ಹಿಂದಿಯನ್ನು, ನವದೆಹಲಿ ಸರಕಾರವು ಹಿಂದಿಯ ಜೊತೆಗೆ ಪಂಜಾಬಿ ಮತ್ತು ಉರ್ದುವನ್ನು ಅಧಿಕೃತ ಭಾಷೆಗಳೆಂದು ಘೋಷಿಸಿದ ಹಾಗೆ ಕರ್ನಾಟಕವು ತುಳುವನ್ನು ಅಧಿಕೃತ ಭಾಷೆಯೆಂದು ಮಾನ್ಯ ಮಾಡಿರದೇ ಇರುವುದರಿಂದ ಕೇಂದ್ರ ಸರಕಾರಕ್ಕೆ ಸುಲಭವಾಗಿ ನುಣುಚಿಕೊಳ್ಳಲು ಸಾಧ್ಯವಾಗಿದೆ.

ಕನ್ನಡ, ತುಳು, ಕೊಡವದಂಥ ಪ್ರಮುಖ ಭಾಷೆಗಳೇ ಒದ್ದಾಡುತ್ತಿರುವಾಗ, ಅರೆಭಾಷೆ, ಹವ್ಯಕ ಕನ್ನಡ, ಕುಂದಾಪುರ ಕನ್ನಡ, ಬಡಗ, ತೊದ ಭಾಷೆಗಳ ಬಗ್ಗೆ ಯೋಚಿಸುವವರು ಯಾರು?

◆ **ಮಾತೃಪ್ರಧಾನ ಸಂಸ್ಕೃತಿಯ ಬಗ್ಗೆ ಅಧ್ಯಯನ ಮಾಡುತ್ತ ಬಂದಿದ್ದೀರಿ. ಈ ಹೆಣ್ಣಿನ ದೃಷ್ಟಿಕೋನ ನಿಮ್ಮನ್ನು ಹೇಗೆ ಪ್ರಭಾವಿಸಿದೆ. ಇದರಿಂದಾಗಿ ನಿಮ್ಮ ದೃಷ್ಟಿಕೋನದಲ್ಲಿ ಆದ ಬದಲಾವಣೆ ಏನು? ಅದು ನಮ್ಮಂತಹವರಿಗೆ ಕಾಣಿಸುವ ಸತ್ಯ ಏನು? ನಾವು ಅದರಿಂದ ಏನನ್ನು ಪಡೆದುಕೊಳ್ಳಬಹುದು?**

ಸ್ಥೂಲವಾಗಿ ಜಾನಪದವು ಮಹಿಳಾ ಕೇಂದ್ರಿತವಾದುದು. ಜೀವನಾವರ್ತನದ ಹುಟ್ಟು, ಮೈ ನೆರೆಯುವಿಕೆ, ಮದುವೆ, ಬಸುರಿ, ಸಾವಿನ ಸಂದರ್ಭಗಳಲ್ಲಿ ಮತ್ತು ವಾರ್ಷಿಕಾವರ್ತನದ ಹಬ್ಬ, ಹರಿದಿನ, ಆರಾಧನಾ ಕ್ರಿಯಾವಿಧಿಗಳಲ್ಲಿ ಹಾಗೂ ಕುಟುಂಬದ ಅಧಿಕಾರದ ಪ್ರಶ್ನೆಗಳಲ್ಲಿ ಮಹಿಳೆಯರು ನಿರ್ವಹಿಸುವ ಜವಾಬ್ದಾರಿಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಮಹಿಳಾ ಕೇಂದ್ರಿತವಾದ ನಿರೂಪಣಾ ಶೈಲಿಯೊಂದನ್ನು ನಮಗೆ ಗುರುತಿಸಲು ಸಾಧ್ಯವಾಗುತ್ತದೆ. ಕರ್ನಾಟಕದ ಬಂಧುತ್ವ ವ್ಯವಸ್ಥೆಯಲ್ಲಿಯೂ ಮಹಿಳೆಯರ ಸ್ಥಾನ ನಿರ್ಣಾಯಕವಾಗಿರುತ್ತದೆ. ತುಳುನಾಡಿನ ಜಾನಪದದ ಒಂದು ಪ್ರಮುಖ ಅಂಗವಾದ ಪಾಡ್ದನಗಳಂತೂ ಸ್ತ್ರೀಯನ್ನೇ ಕೇಂದ್ರದಲ್ಲಿಟ್ಟುಕೊಂಡು ರಚಿತವಾಗಿವೆ. ಇಂಥ ಕಡೆ ಕಂಡುಬರುವ 'ಸ್ತ್ರೀಪ್ರಜ್ಞೆ'ಯ ಕಡೆಗೆ ನಮ್ಮ ಗಮನ ಹರಿಯಬೇಕು. ಮತ್ತು ಅಲ್ಲಿನ ಪರಿಭಾಷೆಗಳ ಮೂಲಕ ನಾವು ಓದುಗರನ್ನೋ ಜನಗಳನ್ನೋ ತಲುಪಬೇಕು. ತುಳುನಾಡಿನ ಜನಪ್ರಿಯ ಪಾಡ್ದನವಾದ 'ಬಲಜೀವು ಮಾನಿಗ'ದ ನಾಯಕಿಯು ಸ್ತ್ರೀತ್ವದ ಪರಿಪೂರ್ಣ ಮಾದರಿಯೆಂದೇ ನನ್ನ ಭಾವನೆ. ಇದೇ ರೀತಿ ನಾವು ಇತರ ಪಾಡ್ದನಗಳನ್ನೂ ಅಧ್ಯಯನ ಮಾಡಬಹುದು. ಸಿರಿ, ಕಲ್ಲುರ್ಟಿ